Sri H. C. LINGA REDDY.—Are the Government aware that of late for want of finance no loans are issued in the several R.I.C.S. Societies of the Taluk?

*Sri JAGANNATH RAO CHANDRIKI.—Yes, it has been brought to the notice of Government.

Sri H. C. LINGA REDDY.—May I know the remedy the Government is contemplating to issue the loans?

Sri JAGANNATH RAO CHANDRIKI.—The question was about lack of finance. There were some difficulties. We have approached the Reserve Bank of India for finance; it has promised to give Rs. 2,50,00,000. There was some hitch between the Co-operation Department and the Rural Industrialisation Department. That has been solved now. I believe in the near future, loans will be disposed of.

Construction of a Dam at Harobele.

Q.—313. Sri S. KARIAPPA (Virupakshipura).—

Will the Government be pleased to state:—

when the construction of a dam across the river Arkavathi at Harobele will be taken up?

A.—H. K. VEERANNA GOWDH (Minister for Public Works).—

Approval of the Planning Commission, Government of India, to the Project is awaited.

ಶ್ರೀ ಎಸ್. ಕರಿಯಪ್ಪ.—ಈ ಹಾರೋಬೆಳೆ ಪ್ರಾಜೆಕ್ಟ್ ಎಷ್ಟು ದಿವಸದಿಂದ ತಳ್ಳಿಕೊಂಡು ಬರುತ್ತಾ ಇದೆ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಬಹಳ ದಿವಸದಿಂದ ತಳ್ಳಿಕೊಂಡು ಬರುತ್ತಾ ಇರುವಹಾಗೆ ಕಾಣುವುದಿಲ್ಲ. ಇದನ್ನು ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದೆ. ಅದಕ್ಕೆ ಒಪ್ಪಿಗೆ ಬರಬೇಕು. ಇಷ್ಟನ್ನೇ ತಾರೀಖಿನಲ್ಲಿ ಒಪ್ಪಿಗೆ ಬಂದಿದೆ ಎಂಬ ಸಮಾಚಾರ ಇಲ್ಲಿ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಇದಕ್ಕೆ ಎಷ್ಟು ರೂಪಾಯಿ ವೆಚ್ಚವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—40 ಲಕ್ಷ ರೂಪಾಯಿ ಆಗುತ್ತದೆ ಎಂದು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಎಷ್ಟು ಎಕರೆ ತರಿ ಆಗುತ್ತದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—5,118 ಎಕರೆ ತರಿ ಆಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಈಗ ಇಷ್ಟೊಂದು ಕಡಮೆ ವೆಚ್ಚದಲ್ಲಾಗುವ ಈ ಪ್ರಾಜೆಕ್ಟನ್ನು ಬೇಗ ಕೈಕೊಳ್ಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದಕ್ಕೆ ಪ್ಲಾನಿಂಗ್ ಕಮಿಷನ್ ನಮ್ಮ ಮತಿ ದೊರೆಯಬೇಕು, ದೊರೆತಕೂಡಲೆ ಕೈಕೊಳ್ಳುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಇದನ್ನು ನಮ್ಮ ಮತಿ ಪಡೆಯಲು ಕಳುಹಿಸಿ ಎಷ್ಟು ದಿವಸವಾಯಿತು?

ಶ್ರೀ ಎಚ್. ಕೆ. ವೀರಣ್ಣಗೌಡ.—ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿತ್ತು. ಕಳುಹಿಸಿದ ತಾರೀಖು ತಿಳಿಯದು.

ಶ್ರೀ ಎಸ್. ಕರಿಯಪ್ಪ.—ಇಷ್ಟು ತಿಂಗಳಾಗಿದೆಯೆಂಬುದನ್ನಾದರೂ ಹೇಳಬಹುದಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ಸಮಾಚಾರ ಇಲ್ಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಪ್ಲಾನಿಂಗ್ ಕಮಿಷನ್ ಅವರನ್ನು ತಗಾದೆಮಾಡಿ ಬೇಗ ಈ ಕಾರ್ಯ ಕೈಕೊಳ್ಳುತ್ತೀರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬೇಕಾದರೆ ಮಾಡೋಣ. ಅದು ತಾನಾಗಿಯೇ ಬರುವುದರಿಂದ ತಗಾದೆ ಮಾಡುವ ಅಗತ್ಯವಿಲ್ಲವೆಂದು ಕಾಣುತ್ತದೆ.

Water Supply Scheme at Harohalli.

Q.—315. Sri S. KARIAPPA (Virupakshipura).—

Will the Government be pleased to state:—

(a) whether there is any proposal to take up water supply scheme at Harohalli, Kanakapura Taluk;

(b) if so, the stage at which it stands at present?

A.—Sri R. CHENNIGARAMIAH (Minister for Local Self-Government).—

(a) Yes.

(b) The approval of the Government of India is awaited.

ಶ್ರೀ ಎಸ್. ಕರಿಯಪ್ಪ.—ಈ ಯೋಜನೆ ತಯಾರಾಗಿ ಎಷ್ಟು ದಿವಸವಾಯಿತು?

ಶ್ರೀ ಆರ್. ಚೆನ್ನಿಗರಾಮಯ್ಯ.—ತಾರೀಖು ತಿಳಿಯದು, ಬೇಕಾದರೆ ವಿಚಾರಿಸಿ ತಿಳಿಸುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಇದು ನಮ್ಮಾರು ಮೂರು ವರ್ಷಗಳಿಂದ ತಳ್ಳಿಕೊಂಡು ಬರುತ್ತಿದೆಯೆಂದು ಹೇಳಿದರೆ ಒಪ್ಪುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯ.—ಇರಬಹುದು, ಎರಡನೆಯ ಬ್ಯಾಚ್‌ನಲ್ಲಿ ಸೇರಿದೆ.

ಶ್ರೀ ಎಸ್. ಕರಿಯಪ್ಪ.—ನಿಧಾನವಾಗುವುದಕ್ಕೆ ಕಾರಣರು ಯಾರೆಂದು ಕಂಡುಹಿಡಿದು ತ್ವರಿತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?